<u>ಸಾಕ್ಷಿಯನ್ನು ನ್ಯಾಯಾಲಯದ ಆದೇಶದಂತೆ ದಿನಾಂಕ 01-03-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದಃ</u>

ಬಕ್ಕಪ್ಪ ತೀರಿಕೊಂಡಾಗ ಆತನ ಶವವನ್ನು ದಾವಾ ಸ್ವತ್ತಿನಲ್ಲಿ ಅಂತ್ಯ ಸಂಸ್ಕಾರ ಮಾಡಲು ನಾವ್ಯಾರು ತಕರಾರು ಮಾಡಿಲ್ಲ ಎಂದು ಸೂಚಿಸಿದರೆ ಸಾಕ್ಷಿ ಬಕ್ಕಪ್ಪನ ಕಡೆಯವರು ಕೇಳಿಕೊಂಡಿದ್ದರಿಂದ ಮತ್ತು ಆತನು ನಮ್ಮ ಕುಟುಂಬದವನೇ ಆಗಿದ್ದರಿಂದ ನಮ್ಮ ತಂದೆ ಆತನ ಶವವನ್ನು ದಾವಾ ಸ್ವತ್ತಿನಲ್ಲಿ ಅಂತ್ಯ ಸಂಸ್ಕಾರ ಮಾಡಲು ಒಪ್ಪಿದ್ದರು ಎನ್ನುತ್ತಾರೆ. ದಾವಾ ಸ್ವತ್ತು ಬಕ್ಕಪ್ಪನ ಆಸ್ತಿ ಆಗಿದ್ದರಿಂದ ಆತನ ಶವವನ್ನು ಅಲ್ಲೆ ಅಂತಿಮ ಸಂಸ್ಕಾರ ಮಾಡಲಾಗಿದೆ ಹೊರತು ನಮ್ಮ ತಂದೆ ಅನುಮತಿ ಮೇರೆಗೆ ಮಾಡಿಲ್ಲ ಎನ್ನುವುದು ಸರಿಯಲ್ಲ.

ಬಕ್ಕಪ್ಪ ತೀರಿಕೊಳ್ಳುವ ಸಂದರ್ಭದಲ್ಲೂ ದಾವಾ ಜಮೀನು ಮತ್ತು ಮನೆ ಆತನ ಕಬ್ಜೆಯಲ್ಲೆ ಇತ್ತು ಮತ್ತು ಈಗಲೂ ಸದರಿ ಸ್ವತ್ತು ವಾದಿಯರ ಕಬ್ಜೆಯಲ್ಲೆ ಇದೆ ಎನ್ನುವುದು ಸರಿಯಲ್ಲ. 2017 ರಲ್ಲಿ ದಾವಾ ಸ್ವತ್ತುಗಳ ಮೇಲಿನ ವಾದಿಯರ ಸ್ವಾಧೀನಕ್ಕೆ ನಾವು ತಂಟೆ ಮಾಡಿದ್ದರಿಂದ ಆಕೆ ಈ ದಾವೆ ಸಲ್ಲಿಸಿದ್ದಾಳೆ ಎನ್ನುವುದು ಸರಿಯಲ್ಲ.

ಬಕ್ಕಪ್ಪ ಅಥವಾ ವಾದಿಯರ ಬಳಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತನ್ನು ಎಷ್ಟು ಹಣ ಕೊಟ್ಟು ಖರೀದಿ ಮಾಡಲಾಯಿತು ಎಂಬ ಬಗ್ಗೆ ಎಲ್ಲೂ ಉಲ್ಲೇಖ ಇಲ್ಲ ಎನ್ನುವುದು ಸರಿಯಲ್ಲ. ಬಕ್ಕಪ್ಪ ಅಥವಾ ವಾದಿಯರ ಬಳಿ ದಾವಾ ಸ್ವತ್ತನ್ನು ನಾವು ಖರೀದಿ ಮಾಡದೆ ಇರುವುದರಿಂದ ಖರೀದಿ ಮೊತ್ತವನ್ನು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ಬಕ್ಕಪ್ಪ ಮತ್ತು ವಾದಿಯರ ಬಳಿ ದಾವಾ ಸ್ವತ್ತಿನ ಸಂಬಂಧ ಯಾವುದೇ ವ್ಯವಹಾರ ನಡೆಯದೆ ಇರುವುದರಿಂದ ಖರೀದಿ ಮೊತ್ತವನ್ನು ಬರೆಸಿಲ್ಲ ಎನ್ನುವುದು ಸರಿಯಲ್ಲ. ಮುಟೇಷನ್ ದಾಖಲೆಗಳಲ್ಲೂ ದಾವಾ ಸ್ವತ್ತುಗಳನ್ನು ನಾವು ಖರೀದಿ ಮಾಡಿರುವ ಬಗ್ಗೆ ನಮೂದು ಇಲ್ಲ ಎನ್ನುವುದು ಸರಿಯಲ್ಲ. ಸೃಷ್ಠಿ ಮಾಡಲಾದ ಕಂದಾಯ ದಾಖಲೆಗಳ ಆಧಾರದ ಮೇಲೆ ದಾವಾ ಸ್ವತ್ತಗಳನ್ನು ನಾವು ಖರೀದಿ ಮಾಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನ ಮಾಲೀಕತ್ವ

ಅಥವಾ ಕಬ್ಜೆಗೆ ನನಗೆ ಮತ್ತು ಇತರೇ ಪ್ರತಿವಾದಿಯರಿಗೆ ಯಾವುದೇ ರೀತಿಯಲ್ಲಿ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**